ಸಂಜೆ ದರ್ಪಣ
ವಾಣಿಜ್ಯ ರಾಜಧಾನಿಯ ಜನಮನದ ಧ್ವನಿ
Sanje Darpana Evening Daily

# ಅವ್ವ ಟ್ರಸ್ಟ್‌ನಿಂದ ಸ್ತನ ಕ್ಯಾನ್ಸರ್ ಮುಂಜಾಗ್ರತೆ ಶಿಬಿರ



**ಹುಬ್ಬಳ್ಳಿ:** ಅವ್ವ ಸೇವಾ ಟ್ರಸ್ಟ್ ವತಿಯಿಂದ ಎಚ್.ಸಿ.ಜಿ ಎನ್.ಎಂ.ಆರ್ ಕ್ಯಾನ್ಸರ್ ಆಸ್ಪತ್ರೆಯ ಸಹಯೋಗದೊಂದಿಗೆ ಇದೇ ಅ. 10ರಂದು ಶಿಕ್ಷಕಿಯರಿಗಾಗಿ ಸ್ತನ ಕ್ಯಾನ್ಸರ್ ಕುರಿತು ಮುಂಜಾಗ್ರತೆ, ಉಚಿತ ಥರ್ಮಲ್ ಪರೀಕ್ಷಾ ಶಿಬಿರವನ್ನು ನಗರದ ಆರ್. ಎನ್.ಶೆಟ್ಟಿ ಕಲ್ಯಾಣಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷರಾದ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ತಮ್ಮ ಅಧ್ಯಕ್ಷತೆಯಲ್ಲಿ ನಡೆದುಕೊಂಡು ಬಂದಿರುವ ಅವ್ವ ಸೇವಾ ಟ್ರಸ್ಟ್ ಸಾಕಷ್ಟು ಜನಪರ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು, ಈಗ ಮಹಿಳೆಯರಲ್ಲಿ ಕಾಡುತ್ತಿರುವ ಸ್ತನ ಕ್ಯಾನ್ಸರ್ ನಿವಾರಣೆ ಬಗ್ಗೆ ಚಿಂತನೆ ನಡೆಸಿ ಇಂತಹದೊಂದು ಕಾರ್ಯಕ್ಕೆ ಕೈ ಹಾಕಿದೆ ಎಂದರು. ಥರ್ಮಲ್ ಸ್ಕ್ರೀನಿಂಗ್ ಅತ್ಯಾಧುನಿಕ ವಿಧಾನವಾಗಿದ್ದು, ಯಾವುದೇ ರೀತಿಯ ನೋವು, ತೊಂದರೆ ಉಂಟಾಗುವುದಿಲ್ಲ ತಪಾಸಣೆಗೊಳಗಾಗಲು ಭಯಬೇಡ ಎಂದು ಅವರು ಮನವಿ ಮಾಡಿದರು.

ಟ್ರಸ್ಟ್‌ನ ಶಶಿ ಸಾಲಿ ಸಹಿತ ಇತರರು ಗೋಷ್ಠಿಯಲ್ಲಿದ್ದರು.

ಸಂಜೆ ದರ್ಪಣ
ವಾಣಿಜ್ಯ ರಾಜಧಾನಿಯ ಜನಮನದ ಧ್ವನಿ
Sanje Darpana Evening Daily

# ಕಲಘಟಗಿಯಲ್ಲಿ ಹೊರಟ್ಟಿ ಅಭಿನಂದನಾ ಸಮಾರಂಭ



**ಕಲಘಟಗಿ:** ದಶಕಗಳಿಂದಲೂ ನಿರಂತರವಾಗಿ ಶೈಕ್ಷಣಿಕ ಕ್ಷೇತ್ರ ಸೇರಿದಂತೆ ಜನಪರ ಅಭಿವೃದ್ಧಿಗಾಗಿ, ಶಿಕ್ಷಕವೃಂದದ ಹಲವಾರು ಸಮಸ್ಯೆಗಳು, ಬೇಡಿಕೆ ಗಳನ್ನು ಈಡೇರಿಸುವುದಕ್ಕಾಗಿ ಹೋರಾಟ ಮಾಡುತ್ತ ಬಂದಿರುವುದ ಕ್ಕಾಗಿ ನನಗೆ ಸೇವೆ ಮಾಡಲು ಅವಕಾಶ ನೀಡಿ-ದ್ದಾರೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಹೇಳಿದರು.

ಸೋಮವಾರ ಪಟ್ಟಣದ ಗರ್ಲ್ಸ್ ಇಂಗ್ಲೀಷ್ ಸ್ಕೂಲ ಕನ್ನಡ ಪ್ರೌಢ ಶಾಲೆ ಯಲ್ಲಿ ಸಭಾಪತಿ ಹೊರಟ್ಟಿ ಅವರಿಗೆ ಏರ್ಪಡಿಸಲಾಗಿದ್ದ, ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ತಾವು ದಶಕಗಳಿಂದಲೂ ಶಿಕ್ಷಕರ ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಶೈಕ್ಷಣಿಕ ಅಭಿವೃದ್ಧಿಯೊಂದಿಗೆ ಶಿಕ್ಷಕರು ಹಲವಾರು ಸಮಸ್ಯೆಗಳ ಬೇಡಿಕೆಗಳು, ಅಭಿವೃದ್ಧಿ ಕಾರ್ಯ ಕೆಲಸಗಳನ್ನು ಮಾಡುತ್ತ ಬಂದಿರುವುದನ್ನು ಹೇಳುತ್ತ ಅವರ ಸಹಕಾರವನ್ನು ನೆನಪಿಸಿಕೊಂಡರು. ಅಲ್ಲದೆ ಇಂದಿನ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯತ್ತ ಶಿಕ್ಷಕ ಸಮುದಾಯದವರು ಪೂರ್ವ ತಯಾರಿಯಲ್ಲಿರಬೇಕು ಎಂದು ಹೇಳಿದರು.

ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ ಕುರಿತು ಉಪನ್ಯಾಸವನ್ನು ನೀಡಲು ಆಗಮಿಸಿದ್ದ ವಿಜ್ಞಾನ ಶಿಕ್ಷಕ ಸಂಜೀವ ಕುಮಾರ ಅವರು ಸಭಾಪತಿ ಬಸವರಾಜ ಹೊರಟ್ಟಿ ಅವರು ಆರಂಭದಿಂದಲೂ ಶಿಕ್ಷಕರ ಸಂಘಟನೆ ಯೊಂದಿಗೆ, ಶಿಕ್ಷಣ ಅಭಿವೃದ್ಧಿಯ ಸಮಾಜಮುಖಿ ಕಾರ್ಯ ಕೆಲಸಗಳನ್ನು ಮಾಡುತ್ತ ಬಂದಿದ್ದಾರೆಂದರು.

ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಹೆಚ್.ಬಿ.ಪಾಟೀಲ, ಉಪನಿರ್ದೇಶಕ ಮೋಹನ ಹಂಚಾಟೆ, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಬಸಾಪೂರ, ಡಾ.ಶಂಭು ಹೆಗಡಾಳ, ವಸಂತ ಹೊರಟ್ಟಿ, ಕೆ.ಬಿ.ಪಾಟೀಲ ಕುಲಕರ್ಣಿ, ತಾಲೂಕಾ ನೌಕರರ ಸಂಘದ ಅಧ್ಯಕ್ಷ ಆರ್.ಎಂ.ಹೊಲ್ತಿಕೊಟಿ, ಶ್ಯಾಮ ಮಲ್ಲನಗೌಡರ್, ಎನ್.ಎಸ್.ಸವಣೂರ, ವಿ.ಎಸ್.ಹುದ್ದಾರ, ಎನ್.ವಿ ಮಂಜಣ್ಣವರ್, ಮುಖ್ಯೋಪಾಧ್ಯಾಯ ಕೇಶವ ಕೊಂಗಿ, ಶ್ರೀಧರ ಪಾಟೀಲಕುಲಕರ್ಣಿ, ಕಲಾವಿದ ಎಂ.ಆರ್.ತೊಟಗಂಟಿ, ಈಶ್ವರ ಜವಳಿ, ಪ್ರಕಾಶ ಕುಂಬಾರ, ಎ.ವಿ.ಜಯರಾಮ. ಕುಮಾರ ಕೆ.ಎಫ್., ಸಂತೋಷ್ ಬಿಜಾಪೂರ, ಪ್ರಮೋದ ಬಿರಾದಾರ ಮುಂತಾದವರು ಪಾಲ್ಗೊಂಡಿದ್ದರು.